

ಅನುಭವ ನೀಡುವುದಿಲ್ಲ. ಮರುಬಳಕೆಯ ಮೂಲತತ್ವವನ್ನೇ ಮರೆಯುವ ಈ ಆಧುನಿಕ ವ್ಯಾಪಾರೀಕರಣದ ಕೌದಿಗಳು ಪ್ಲಾಸ್ಟಿಕ್ ಹೂಗಳಂತೆ ಕಾಣುತ್ತವೆ. ಕೈಹೊಲಿಗೆಯ ಬದಲು ಯಂತ್ರದ ಹೊಲಿಗೆಯನ್ನು ಬಳಸುವ ಪ್ರಯತ್ನಗಳೂ ನಡೆದಿವೆ. ಆದರೆ ಹಲವು ಪದರಗಳ ಬಟ್ಟೆಗಳನ್ನು ಸೇರಿಸಿ ಹೊಲಿಯಬೇಕಾದ್ದರಿಂದ, ಯಂತ್ರಗಳಲ್ಲಿ ಬಟ್ಟೆ ಪದರಗಳು ಸರಿದು ಹೊಲಿಗೆ ಕೆಡುತ್ತದೆ. ಒಂದೇ ಗಾತ್ರದ ಕೈಹೊಲಿಗೆಯೇ ಕೌದಿಗೆ ಲಕ್ಷಣ.

ಯುಗಾದಿ ಮುಗಿದು ಬೇಸಿಗೆ ಶುರುವಾದಾಗ ಸಾಮಾನ್ಯವಾಗಿ ರೈತಾಪಿ ಜನರಿಗೆ ಹೊಲದ ಕೆಲಸಗಳು ಕಡಿಮೆ ಇರುತ್ತವೆ. ಆ ಹೊತ್ತಿನಲ್ಲಿ ಗಂಡಸರು ಅರಳಿಕಟ್ಟೆಯ ಮೇಲೆ ಕುಳಿತು ಬೀಡಿ ಸೇದುತ್ತಾ ಹರಟೆ ಹೊಡೆದು ಸಮಯ ಕಳೆದರೆ, ಮನೆಯ ಹೆಂಗಸರು ಬೇಗನೆ ಬೆಳಗಿನ ಊಟದ ವ್ಯವಸ್ಥೆ ಮುಗಿಸಿ ಕೌದಿ ಹೊಲಿಯಲು ಕೂಡುತ್ತಾರೆ. ಬೇಸಿಗೆಯ ಬಿಸಿಗೆ ಬಟ್ಟೆಗಳು ಮೆತ್ತಗಾಗಿ ಹೆಚ್ಚು ತ್ರಾಸಿಲ್ಲದೆ ಹೊಲಿಗೆ ಹಾಕಿಸಿಕೊಳ್ಳುತ್ತವೆ. ನಾಲ್ಕು ಹೆಂಗಸರು ನಾಲ್ಕು ಮೂಲೆಗೆ ಕುಳಿತು ದೊಡ್ಡ ಕೌದಿಯನ್ನು ಹೊಲಿಯಲು ಸಾಧ್ಯವಾಗುತ್ತದೆ. ಈ ಮೂಲೆಯಿಂದ ಆ ಮೂಲೆಗೆ ಒಬ್ಬಾಕೆ ಹೊಲಿಗೆ ಹಾಕಿದರೆ, ಇನ್ನೊಬ್ಬಾಕೆ ಆ ಮೂಲೆಯಿಂದ ಇನ್ನೊಂದು ಮೂಲೆಗೆ ಹೊಲಿಗೆ ಮುಗಿಸಿರುತ್ತಾಳೆ. ಗುಂಪು ನರ್ತಕರು ನಾದದ ಲಯಕ್ಕೆ ತಕ್ಕಂತೆ ಹೊಂದಾಣಿಕೆಯಿಂದ ಕಾಲು ಹಾಕುತ್ತಾ ಕುಣಿಯುವ ಕ್ರಮದಂತೆ ಈ ಹೊಲಿಗೆ ಸಾಗುತ್ತದೆ. ಹೊತ್ತು ಸಾಗಿದಂತೆ ದೊಡ್ಡ ಕೌದಿಯೊಂದು ಭೂಮಿ ತಿರುಗಿದಂತೆ ನಿಧಾನಕ್ಕೆ ಅವರ ಮಧ್ಯೆ ತಿರುಗುತ್ತಿರುತ್ತದೆ. ನಾಲ್ವರ ಹೊಲಿಗೆಯ ಲಯದಲ್ಲಿ ತುಸು ಹೆಚ್ಚು ಕಡಿಮೆಯಾದರೂ ಕೆಲಸ ಕೆಡುತ್ತದೆ. ಕೌದಿ ಹೊಲಿಯುತ್ತಾ ಹೋದಂತೆಲ್ಲಾ ಹೆಂಗಸರು ತಮ್ಮ ಕಷ್ಟ–ಸುಖ, ಸಂಭ್ರಮ–ತಮಾಷೆ, ಕತೆ–ಒಗಟು ಎಲ್ಲವನ್ನೂ ವಿನಿಮಯ ಮಾಡಿಕೊಳ್ಳುತ್ತಾರೆ. ಗೋಕಾಕ್‌ನ ಕಮಲ ಬಾಳಿಪಡಿ ಅವರು, ಕೌದಿ ಹೊಲಿಯುತ್ತಾ ಹಾಡುವ ಸಿದ್ಧಾರೂಢರ ಭಜನೆಯೊಂದನ್ನು ಸುಶ್ರಾವ್ಯವಾಗಿ ಹಾಡಿ ತೋರಿಸಿ, ಗೋಡೆಯ ಮೇಲಿನ ಪಟದಲ್ಲಿ ನಾಲ್ಕು ಅಂಗುಲ ಲಂಗೋಟಿಯನ್ನಷ್ಟೇ ಉಟ್ಟು ಸಂತೃಪ್ತನಾಗಿ ನಗೆ ಬೀರುತ್ತಿದ್ದ ಆ ಮಹಾನುಭಾವರಿಗೆ ಭಕ್ತಿಯಿಂದ ಕೈಮುಗಿದ ದೃಶ್ಯ ಹೃದ್ಯವಾಗಿತ್ತು. ಕೌದಿ ಹೊಲಿಯುವ ಹೊತ್ತಿನಲ್ಲಿ ಹೆಂಗಸರಿಗೆ ಬಾಯಾಡಿಸಲಿಕ್ಕೆ ಏನಾದರೂ ಬೇಕು. ಹೊಲದಲ್ಲಿ ಬೆಳೆದ ವಿವಿಧ ಕಾಳುಗಳನ್ನು ಬೇಯಿಸಿ, ಒಗ್ಗರಣೆ, ಕಾಯಿತುರಿ ಹಾಕಿದ ಗುಗ್ರಿ ಎಲ್ಲರಿಗೂ ಅಚ್ಚುಮೆಚ್ಚು. ಅದಿಲ್ಲದಿದ್ದರೆ ಹಪ್ಪಳ, ಹುರಿದ ಹುಣಿಸೆ ಬೀಜವೂ ಆದೀತು. ಜೊತೆಗೆ ಬೆಲ್ಲದ ಚಹಾ ಕೂಡಾ ಆಗಾಗ ಒಳಗಿನಿಂದ ಸರಬರಾಜಾಗುತ್ತಿರುತ್ತದೆ. ಕೌದಿ ಹೊಲಿಯುವ ಕೂಟ ಒಂದು ರೀತಿಯಲ್ಲಿ ಮಹಿಳೆಯರ ಸಮ್ಮೇಳನದಂತೆ ಉತ್ಸಾಹದಿಂದ ನಡೆಯುತ್ತದೆ.



‘ಒಂದು ದೊಡ್ಡ ಕೌದಿ ಹೊಲಿಯೋದಕ್ಕೆ ಮೂರು ತಿಂಗಳಾದರೂ ಹಿಡಿತದಪ್ಪಾ...’ ಎಂದು ಕಲಬುರಗಿ ಜಿಲ್ಲೆಯ ಕೋಳಕೂರಿನ ಕಮಲವ್ವ ಅವರು ಹೇಳುವಾಗ ಅಪರೂಪಕ್ಕೆ ಸುಡುವ ಕಲಬುರಗಿ ಪ್ರದೇಶಕ್ಕೆ ಶ್ರಾವಣದ ಮಳೆ ಬಿದ್ದು ತಂಪಗಾಗಿತ್ತು. ‘ಕೋಳ’ ನದಿಯ ದಡದ ಮೇಲಿರುವ ಈ ಪುಟ್ಟ ಗ್ರಾಮವು ಹಲವು ದಾರ್ಶನಿಕ ಶರಣರು ಇದ್ದು ಹರಸಿದ ಕ್ಷೇತ್ರವಾಗಿದೆ. ಹೊಲದಲ್ಲಿಯೇ ಮನೆ ಮಾಡಿಕೊಂಡು ವಾಸಿಸುವ ಎಪ್ಪತ್ತರ ಆಸುಪಾಸಿನ ಕಮಲವ್ವ ತನ್ನೆಲ್ಲಾ ಗೆಳತಿಯರ ಜೊತೆ ಸೇರಿಕೊಂಡು ಕೌದಿಗಳನ್ನು ತೋರಿಸುತ್ತಾ ತನ್ನ ಅನುಭವವನ್ನು ಹೇಳಿಕೊಂಡರು. ಅವರ ಪತಿ ಶರಣಪ್ಪ ಗೌಡ ಅಲ್ಲಿಯೇ ಎಳೆ ಬಿಸಿಲಿಗೆ ಅಡ್ಡಾಡುತ್ತಾ, ಪತ್ನಿಯ ಮಾತಿಗೆ ಸಮ್ಮತಿ ಸೂಚಿಸುವಂತೆ ಗೋಣು ಹಾಕುತ್ತಿದ್ದರು. ಕಳೆದ ಸುಗ್ಗಿಗೆ ಹೊಲದಲ್ಲಿ ಬೆಳೆದ ಬೆಳೆಗಳು ಗೋಣಿಚೀಲದಲ್ಲಿ ಹೊಟ್ಟೆ ಬಿರಿಯುವಂತೆ ತುಂಬಿಕೊಂಡು, ಗೋಡೆಗಳಿಗೆ ಸಾಲಾಗಿ ನಿಂತಿದ್ದವು.

### ಕೌದಿಗೆ ಸೀರೀನೆ ಛಂದ...

ಬೇಸಿಗೆಗಾಲದ ಮೂರು ತಿಂಗಳೂ ನಿರಂತರವಾಗಿ ಕಣ್ಣಲ್ಲಿ ಕಣ್ಣಿಟ್ಟು ಹೊಲಿಗೆ ಹಾಕಿ, ಬೆನ್ನು ನೋವು ಬಂದರೂ ‘ಹಾ... ಹೋ...’ ಎನ್ನುತ್ತಾ ಮೈಮುರಿದು ಸುಧಾರಿಸಿಕೊಂಡು, ಬೇಸಿಗೆಯ